ಏತ ನೀರಾವರಿ ಯೋಜನೆ

2147 (207); ಶ್ರೀ ಕೋಳಿವಾಡ ಕೆ.ಬಿ (ರಾಣೇಬೆನ್ನೂರು)

ಅ) ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲೂಕು ಯಕ್ಲಾಸಪುರ ಏತನೀರಾವರಿ ಯೋಜನೆಯ ನೀರನ್ನು ಮರುಬಳಕೆ ಮಾಡುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಇದು ಯಾವ ಹಂತದಲ್ಲಿದೆ;

ಆ) ರಾಣೇಬೆನ್ನೂರು ತಾಲೂಕು ಏತನೀರಾವರಿ ಯೋಜನೆ ಮತ್ತು ರಾಣೇಬೆನ್ನೂರು ದೊಡ್ಡಕೆರೆಗೆ ನೀರು ತುಂಬಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ; ಹಾಗಿದ್ದಲ್ಲಿ ಯಾವ ಹಂತದಲ್ಲಿದೆ;

ಇ) ರಾಣೇಬೆನ್ನೂರು ತಾಲೂಕು ತುಮ್ಮಿನಕಟ್ಟೆ (ಭೈರನಪಾದ) ಹತ್ತಿರ ತುಂಗಭದ್ರಾ ನದಿಗೆ ಸಮತೋಲನ ಜಲಾಶಯ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ ಯಾವ ಹಂತದಲ್ಲಿದೆ;

ಈ) ತುಂಗಾ ಮೇಲ್ದಂಡೆ ಯೋಜನೆ ವಿತರಕ ಸರಪಳಿ 33.450ಕಿಮೀ ಕರೂರು ಹಾಗೂ ಐರಣಿ ಕೆರೆಗಳಿಗೆ ನೀರು ತುಂಬಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ; (ವಿವರ ನೀಡುವುದು)

ಉ) ರಾಣೇಬೆನ್ನೂರು ಕ್ಷೇತ್ರದಲ್ಲಿ ತುಂಗಾ ಮೇಲ್ದಂಡೆ ಯೋಜನೆ ಕಾಲುವೆಗಳನ್ನು ಸ್ವಚ್ಛಗೊಳಿಸಿ (Upkeeping) ದುರಸ್ಥಿ ಮಾಡುವ ಯೋಜನೆ ಮಂಜೂರಾಗಿದೆಯೆ; ಮಂಜೂರಾಗಿದ್ದಲ್ಲಿ ಯಾವಾಗ ಕೆಲಸ ಪ್ರಾರಂಭಿಸಲಾಗುವುದು?

ಶ್ರೀ ಎಂ.ಬಿ. ಪಾಟೀಲ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲೂಕು ಯಕ್ಲಾಸಪುರ ಏತನೀರಾವರಿ ಯೋಜನೆಯು ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯಡಿಯಲ್ಲಿ ಇರುವುದು.

ಆ) ರಾಣೇಬೆನ್ನೂರು ತಾಲೂಕು ಏತನೀರಾವರಿ ಯೋಜನೆ ಹಾಗೂ ರಾಣೇಬೆನ್ನೂರು ದೊಡ್ಡಕೆರೆಗೆ ನೀರು ತುಂಬಿಸುವ ಯೋಜನೆಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳಿಂದ ಪ್ರಸ್ತಾವನೆ ಬಂದಿದ್ದು, ಪರಿಶೀಲನೆ ಹಂತದಲ್ಲಿರುತ್ತದೆ.

ಇ) ರಾಣೇಬೆನ್ನೂರು ತಾಲೂಕು ತುಮ್ಮಿನಕಟ್ಟೆ (ಭೈರನಪಾದ) ಹತ್ತಿರ ತುಂಗಭದ್ರಾ ನದಿಗೆ ಸಮತೋಲನ ಜಲಾಶಯ ನಿರ್ಮಿಸುವ ಯೋಜನೆಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳಿಂದ ಪ್ರಸ್ತಾವನೆ ಬಂದಿದ್ದು, ಪರಿಶೀಲನೆ ಹಂತದಲ್ಲಿರುತ್ತದೆ.

ಈ) ಕರೂರು ಕೆರೆಯು ತುಂಗಾ ಮೇಲ್ದಂಡೆ ಯೋಜನೆ ವಿತರಣಾ ನಾಲೆ–2ರ ಸರಪಳಿ 33.450ಕಿಮೀ ನ ಮೇಲ್ಭಾಗದಲ್ಲಿ Uncommand ನಲ್ಲಿ ಬರುತ್ತಿದ್ದು ಯೋಜನಾ ವರದಿಯಂತೆ ಕಾಂಟೂರ್ ಕಾಲುವೆಯ ಮೇಲ್ಭಾಗದ ಕೆರೆಗೆ ನೀರು ಒದಗಿಸಲು ಅವಕಾಶ ಇರುವುದಿಲ್ಲ. ಐರಣಿ ಕೆರೆಯು ವಿತರಣಾ ನಾಲೆ–2 ರಡಿ ಜೈ.40.46 ಕಿಮೀನ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿ ಬರುವುದರಿಂದ ನೀರಿನ ಲಭ್ಯತೆ ಅನುಸಾರ ನೀರನ್ನು ಒದಗಿಸಲು ಪರಿಗಣಿಸಲಾಗುವುದು.

ಉ) ರಾಣೇಬೆನ್ನೂರು ಕ್ಷೇತ್ರದಲ್ಲಿ ತುಂಗಾ ಮೇಲ್ದಂಡೆ ಯೋಜನೆ ಕಾಲುವೆಗಳನ್ನು ಸ್ವಚ್ಛಗೊಳಿಸಿ ದುರಸ್ಥಿ ಮಾಡುವ (Upkeeping) ಕಾಮಗಾರಿಯು ಪರಿಶೀಲನೆಯಲ್ಲಿದೆ.

ಐ.ಟಿ.ಐ ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು

2148 (3173); ಶ್ರೀ ಕೋನರಡ್ಡಿ ಎನ್.ಎಚ್. (ನವಲಗುಂದ)

ಅ) ರಾಜ್ಯದಲ್ಲಿ ಸರ್ಕಾರಿ ಐ.ಟಿ.ಐ. ಕಾಲೇಜುಗಳಿಗೆ ಸ್ವಂತ ಕಟ್ಟಡ ಹಾಗೂ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;